2714 (2975) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಿಕ (ಹುಕ್ಕೇರಿ) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ರೇಷ್ಮೆ ಇಲಾಖೆಯ ಯರಗಟ್ಟಿ ಫಾರ್ಮಿನಲ್ಲಿ ಎಷ್ಟು ಜಮೀನು ಇದೆ;

ಆ) ಅದರ ಉತ್ಪನ್ನ ಎಷ್ಟು ; ವೆಚ್ಚ ಎಷ್ಟು;

ಇ) ಯರಗಟ್ಟಿ ಫಾರ್ಮನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ;

ಈ) ಯರಗಟ್ಟಿ ಫಾರ್ಮನ್ನು ರೈತರಿಗೆ ನೀಡಿ ಅಭಿವೃದ್ಧಿಪಡಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಉ) ಇದ್ದಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) 64.13 ಎಕರೆ ಜಮೀನು ಇದೆ.

ಆ) ಈ ಕೃಷಿ ಕ್ಷೇತ್ರದಲ್ಲಿ ಉತ್ಪಾದಿಸಿದ ಬಿತ್ತನೆ ಗೂಡು, ಆದಾಯ ಮತ್ತು ವೆಚ್ಚದ ವಿವರ ಕೆಳಕಂಡಂತಿದೆ.

ಕ್ರ.ಸಂ.	ವರ್ಷ	ಗೂಡು ಉತ್ಪಾದನೆ (ಸಂಖ್ಯೆ)	ಆದಾಯ (ಲಕ್ಷಗಳಲ್ಲಿ)	ವೆಚ್ಚ (ಲಕ್ಷಗಳಲ್ಲಿ)
1.	2000–01	321600	0.045	10.66
2.	2001–02	164500	0.314	10.395
3.	2002–03	95700	0.148	12.688
4.	2003–04	23828	0.27	14.88
5.	2004–05 (ಜನವರಿ ಅಂತ್ಯಕ್ಕೆ)	24170	0.02	11.89

ಇ) 1) 5 ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ವ್ಯವಸಾಯ ಕೈಗೊಳ್ಳಲಾಗುತ್ತಿದೆ.

2) 5 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

3) ಹುಳು ಸಾಕಾಣೆಗೆ ಅನುಕೂಲವಾಗುವಂತೆ 6 ಕಟ್ಟಡಗಳನ್ನು ನಿರ್ಮಿಸಲಾಗಿದೆ.

4) ರೇಷ್ಮೆ ಕೃಷಿ ಕ್ಷೇತ್ರದ ನಿರ್ವಹಣೆಗೆ 8 ಸಿಬ್ಬಂದಿ ಒದಗಿಸಲಾಗಿದೆ.

ಮುಂದಿನ ವರ್ಷದಲ್ಲಿ ಕೆಳಕಂಡ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಎ) 8.0 ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ನಿರ್ವಹಣೆ ಮಾಡಿ 10.00 ಲಕ್ಷ ದ್ವಿತಳಿ ಬಿತ್ತನೆ ಗೂಡುಗಳ ಉತ್ಪಾದನೆ.

ಬಿ) ಸುಧಾರಿತ ಹಿಪ್ಪುನೇರಳೆ ತಳಿಗಳನ್ನು 4.00 ಎಕರೆಗಳಲ್ಲಿ ನಿರ್ವಹಿಸುವುದು ಮತ್ತು 1.00 ಲಕ್ಷ ಸಸಿಗಳನ್ನು ಬೆಳೆಸಿ ರೈತರಿಗೆ ವಿತರಿಸುವುದು.

ಈ) ಇಲ್ಲ. ಇಲಾಖೆಯು ದ್ವಿತಳಿ ಕಾರ್ಯಕ್ರಮ ಹಮ್ಮಿಕೊಂಡು ಈ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಲಿದೆ.

ಉ) ಉದ್ಭವಿಸುವುದಿಲ್ಲ.

2715 (3282) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದಿಂದ ಗದಗವರೆಗೆ ರೈಲ್ವೆ ಗೇಜ್ ಪರಿವರ್ತಿಸುವ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಪ್ರಾರಂಭದಿಂದ ಈವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವರ್ಷವಾರು ಮಂಜೂರು ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಇ) ಇನ್ನೂ ಬಿಡುಗಡೆ ಮಾಡಬೇಕಾದ ಅನುದಾನ ಎಷ್ಟು;

ಈ) ಗೇಜ್ ಪರಿವರ್ತನೆ ಕಾರ್ಯಕ್ಕಾಗಿ ಇನ್ನೂ ತಗುಲಬಹುದಾದ ಅಂದಾಜು ವೆಚ್ಚ ಎಷ್ಟು;

ಉ) ಗೇಜ್ ಪರಿವರ್ತನೆಯನ್ನು ಪೂರ್ತಿಗೊಳಿಸಲು ಹಾಕಿಕೊಂಡಿದ್ದ ಕಾಲಮಿತಿ ಎಷ್ಟು;

ಊ) ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ಗೇಜ್ ಪರಿವರ್ತನೆ ಕಾರ್ಯವನ್ನು ಪೂರ್ತಿಗೊಳಿಸಲಾಗುವುದು?